<u>ದಿ:**28.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು</u>:- ಆರೋಪಿ ಪರ K.C., ವಕೀಲರಿಂದ:-

ನಿಪಿ 6 ದಾಖಲೆಯು ಅಧಿಕೃತ ದಾಖಲೆ ಆಗುವ ಬೇಕಾದಲ್ಲಿ ಸದರಿ ಕಂಪನಿಗೆ ಸಂಬಂಧಿಸಿದ ಬಾರ್ ಕೋಡ್ ಇರುತ್ತದೆ ಎಂದರೆ ಸರಿ. ನಿಪಿ 6 ರಲ್ಲಿ ಕಂಪನಿಯ ಲೋಗೋ ಇರುತ್ತದೆ , ಬಾರ್ ಕೋಡ್ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 6 ದಾಖಲೆಯನ್ನು ಯಾವುದೇ ವ್ಯಕ್ತಿಯು ನಕಲು ಮಾಡಿ ಸಿದ್ಧಪಡಿಸಬಹುದು ಎಂದರೆ ಸರಿಯಲ್ಲ. ನಿಪಿ 6 ದಾಖಲೆಯಲ್ಲಿ ಯಾವುದೇ ರೀತಿಯ ಬಾರ್ ಕೋಡ್ ಮತ್ತು ಅಧಿಕೃತವಾದ ಕಂಪನಿಗೆ ಸಂಬಂಧಿಸಿದ ಸಹಿ ಮತ್ತು ಮುದ್ರೆ ಇರುವುದಿಲ್ಲ ಎಂದರೆ ಸರಿ. ನಿಪಿ 7 ದಾಖಲೆಯಲ್ಲಿ ಸರ್ಕಾರಿ ಸೌಲಭ್ಯದ ಉದ್ದೇಶಕ್ಕೆ ಮಾತ್ರ ದಾಖಲೆ ನೀಡುವುದಾಗಿ ನಮೂದು ಇರುತ್ತದೆ ಎಂದರೆ ಸರಿ. ನಾನು ನಮ್ಮ ಹೊಲದಲ್ಲಿ ಅಡಿಕೆ ಗಳು ಯಾವ ಹಂತದಲ್ಲಿ ಇರುವ ಬಗ್ಗೆ ನಿಪಿ 7 ರಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. ನಾನು ನಮ್ಮ ಜಮೀನಿನಲ್ಲಿ ಅಡಿಕೆ ಬೆಳೆ ಇರುವ ಬಗ್ಗೆ ಯಾವುದೇ ಪೋಟೋಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಪಿ 8 ಪಹಣಿಯು ನನಗೆ ಸೇರಿದ ಸರ್ವೆ ನಂಬರ್ 123/5 ಸೊಕ್ಕೆ ಗ್ರಾಮದ ಜಮೀನಿಗೆ ಸಂಬಂಧಿಸಿದ್ದು ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ

ಪಹಣಿಗಳಲ್ಲಿ ಯಾವ ಬೆಳೆಯನ್ನು ಬೆಳೆಯುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ನಿಪಿ 8 ಪಹಣಿಯಲ್ಲಿ ಕಲಂ ನಂಬರ್ 9 ರಲ್ಲಿ ಬೆಳೆಯ ಹೆಸರು ಮೆಕ್ಕಜೋಳ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ 8 ಪಹಣಿಯಲ್ಲಿ ಜಮೀನು ನೀರಾವರಿ ಜಮೀನು ಅಥವಾ ಬೋರ್ ವೇಲ್ ಇರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ 8 ಜಮೀನು ಮಳೆ ಆಶ್ರೀತ ಜಮೀನು ಇದ್ದು , ಕೇವಲ ಮಳೆ ಬಿದ್ದರೆ ಮಾತ್ರ ವರ್ಷ ಕ್ಕೆ ಒಂದೇ ಬೆಳೆ ಬೆಳೆಯಲು ಸಾಧ್ಯ ಎಂದರೆ ಸರಿ.

ನಿಪಿ 9 ದಾಖಲೆಯಲ್ಲಿ ಸರ್ಕಾರಿ ಸೌಲಭ್ಯದ ಉದ್ದೇಶಕ್ಕೆ ಮಾತ್ರ ದಾಖಲೆ ನೀಡುವುದಾಗಿ ನಮೂದು ಇರುತ್ತದೆ ಎಂದರೆ ಸರಿ. ನಾನು ನಮ್ಮ ಹೋಲದಲ್ಲಿ 2 ಎಕರೆ ಅಡಿಕೆ, 2 ಎಕರೆ ಡ್ರಾಗನ್ ಪ್ರೂಟ್ ಬೆಳೆ ಬೆಳೆದಿರುತ್ತಾರೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಸರ್ವೆ ನಂಬರ್ 11/10 ಸೊಕ್ಕ ಗ್ರಾಮ ಒಟಟು ವಿಸ್ತೀರ್ಣ 5 ಎಕರೆ 06 ಗುಂಟೆ ಇರುತ್ತದೆ ಎಂದರೆ ಸರಿ. ಸದರಿ 5 ಎಕರೆ 6 ಗುಂಟೆಯಲ್ಲಿ 2 ಎಕರೆ ಅಡಿಕೆ, 2 ಎಕರೆ ಡ್ರಾಗನ್ ಪ್ರೂಟ್ ಬೆಳೆದಿದ್ದು ಉಳಿದ 1 ಎಕರೆ 06 ಗುಂಟೆಯಲ್ಲಿ ಯಾವ ಬೆಳೆ ಬೆಳೆದಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ನನ್ನ ಹೆಂಡತಿ ಹೆಸರಿನ ಕೋಳಿ ಫಾರಂ ಇರುತ್ತದೆ ಎಂದು ಹೇಳುತ್ತಾರೆ . ನಿಪಿ 9 ರಲ್ಲಿ ದಾಖಲೆಯನ್ನು ದಿಃ 10.09.2025 ರಲ್ಲಿ ಪಡೆದುಕೊಂಡಿರುತ್ತೇನೆ . ನನಗೆ ಸಂಬಂದಿಸಿದ ಕೋಳಿ ಪಾರಂ ಇರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಿಪಿ 10 ಪಹಣಿಯಲ್ಲಿ ಕಲಂ 9 ರಲ್ಲಿ ಬೆಳೆಯ ಹೆಸರು ಮೆಕ್ಕೆಜೋಳ ಎಂದು ನಮೂದು ಇರುತ್ತದೆ ಎಂದರೆ ಸರಿ. ನಾನು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಸೇರಿ ನಿಪಿ 7 ಮತ್ತು 9 ದಾಖಲೆಗಳನ್ನು ಸೃಷ್ಠಿ ಮಾಡಿದ ದಾಖಲೆ ಇರುತ್ತವೆ ಎಂದರೆ ಸರಿಯಲ್ಲ. ನಿಪಿ 8 ಮತ್ತು 10 ದಾಖಲೆಗಳ ಪಹಣಿಗಳ ಜಮೀನುಗಳಲ್ಲಿ ನಾನು ಮೆಕ್ಕೆ ಜೋಳ ಬೆಳೆ ಬೆಳೆದಿದ್ದು , ಅಡಿಕೆ ಮತ್ತು ಡ್ರಾಗನ್ ಫ್ರೋಟ್ ಬೆಳೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಜುಲೈ 2020 ಕ್ಕೆ ಸಂಬಂದಿಸಿದ ಹಾಗೆ ನಿಪಿ 6 ದಾಖಲೆಯ್ಲ್ಲಿ ನಮೂದು ಇರುವ S.M.L. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು ಸಂಬಂದಪಟ್ಟ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನಗೆ ಸದರಿ ದಾಖಲೆಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ನನಗೆ ಆರೋಪಿ ನೀಡಿದೆ ಎಂದು ಹೇಳುವ 13 ಲಕ್ಷ ಹಣವನ್ನು ನೀಡುವ ಸಾಮರ್ಥ್ಯ ಇರುವುದಿಲ್ಲ . ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನೀಡಿರುವ ಸಾಕ್ಷಿ ಮತ್ತು ದಾಖಲೆಗಳು ಒಂದಕ್ಕೊಂದು ವ್ಯತರಿಕ್ತವಾಗಿ ಇರುವ ಕಾರಣ ನನ್ನ

ದೂರನಲ್ಲಿ ಸಲ್ಲಿಸಿರುವ ಪರಿಹಾರ ಪಡೆಯಲು ಅರ್ಹ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ 13 ಲಕ್ಷ ಹಣ ನೀಡಲು ಭಾದ್ಯಸ್ಥನು ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು